## 9

### ಮೂಲ ವಾಕ್ಯ: ಯೋಹಾನ 4:20-24

# ಆಚರಣೆಯ ವಿವಿಧ ಪದ್ಧತಿಗಳ ಪ್ರಶ್ನೆಗಳು

ಕರ್ತನ ಭೋಜನದ ಕುರಿತಾದ ಯೇಸುವಿನ ಸಲಹೆಗಳನ್ನು ಮೀರದಂತೆ, ಸಭೆಗಳವರು ತಮ್ಮ ಪದ್ಧತಿಗಳಲ್ಲಿ ಮಾರ್ಪಾಟುಗಳನ್ನು ಮಾಡಬಹುದು. ಇದರಲ್ಲಿ ಬದಲಾವಣೆ ಮಾಡುವವರು; ಯೇಸು ಬೋಧಿಸಿರುವ ವಿಚಾರಗಳಿಗೆ ಸೇರಿಸುವವರೂ ಮತ್ತು ತೆಗೆದು ಹಾಕುವವರೂ ಆಗಿದ್ದ ಆತನ ಅಪ್ಪಣೆಗಳಿಗೆ ಅವಿಧೇಯರಾಗಿರುತ್ತಾರೆ (ಮತ್ತಾಯ 28:20).

ಪುನಃ ಸ್ಥಾಪನೆಯ ಕ್ರಾಂತಿ ಉಂಟಾದ ಸಮಯದಲ್ಲಿ, ಅನೇಕ ಸಭೆಗಳವರು ಕರ್ತನ ಭೋಜನದಲ್ಲಿ ವೈನ್ ಬಳಸುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಈ ಪದ್ಧತಿಯಲ್ಲಿ ಮಾರ್ಪಾಟು ಉಂಟಾಯಿತು, ಏಕೆಂದರೆ ಅಮೇರಿಕೆಯಲ್ಲಿ ಅದರ ಪರಿಣಾಮ ಉಂಟಾಗಿತ್ತು. ಅಂದಿನಿಂದ ಅಮೇರಿಕೆಯ ಅನೇಕ ಸಭೆಗಳವರು ದ್ರಾಕ್ಷಾರಸವನ್ನು ಬಳಸಲು ಆರಂಭಿಸಿದರು.

ಪುನಃ ಸ್ಥಾಪನೆಯ ಸಮಯದಲ್ಲಿ ಸಭೆಯಲ್ಲಿ ಒಂದೇ ಪಾತ್ರೆಯನ್ನು ಬಳಸುತ್ತಿದ್ದರು. ದೊಡ್ಡ ಸಭೆಗಳವರು ಎರಡು ಪಾತ್ರೆಗಳನ್ನು ಬಳಸಲು ಆರಂಭಿಸಿದರು, ಒಂದನ್ನು ತುಂಬಿಕೊಳ್ಳಲು, ಖಾಲಿಯಾದ ಇನ್ನೊಂದನ್ನು ತುಂಬಿಕೊಳ್ಳಲು ಮತ್ತೊಂದನ್ನು ಬಳಸಿದರು. ಥಾಮಸ್ ಮತ್ತು ಅಲೆಕ್ಸಾಂಡರ್ ಪ್ರಸಂಗಿಸಿದ ಚರ್ಚ್ ಆಫ್ ಕ್ರೈಸ್ಟ್ ವರ್ಜಿನಿಯಾದಲ್ಲಿ ಗಂಡಸರಿಗಾಗಿ, ಹಾಗೂ ಹೆಂಗಸರಿಗಾಗಿ ಪ್ರತ್ಯೇಕವಾದ ಎರಡು ಪಾನ ಪಾತ್ರೆಗಳನ್ನು ಬಳಸಿದ್ದರು. ಹೊಗೆ ಸೊಪ್ಪನ್ನು ಬಳಸುತ್ತಿದ್ದ ಪುರುಷರ ಪಾತ್ರೆಯನ್ನು ಸ್ತ್ರೀಯರು ಬಳಸಲು ಇಚ್ಛೆಪಡಲಿಲ್ಲ.

ಭಯಂಕರವಾದ "ಕ್ಷಯ ರೋಗವು ಉಂಟಾದ ಹತ್ತೊಂಬತ್ತನೇ ಶತಮಾನದ ಸಮಯದಲ್ಲಿ ಅದು ಇನ್ನೊಬ್ಬರಿಗೆ ಅಂಟಬಾರದೆಂದು, ಸಭೆಯವರು, ವೈಯಕ್ತಿಕವಾದ ಚಿಕ್ಕ ಚಿಕ್ಕ ಪಾತ್ರೆಗಳನ್ನು ಬಳಸಿದರು."[1] ಕ್ಷಯ ರೋಗ ಅಂಟುವ ಗೊಂದಲ ಇದ್ಯಾಗ್ಯೂ, ದೇವರು ಅವರನ್ನು ಅಂಟುರೋಗವು ಅಂಟದಂತೆ ಮಾಡುವನೆಂದು ತಿಳಿದು ಒಂದೇ ಪಾತ್ರೆಯನ್ನು ಬಳಸಿದರು.

### ಒಂದೇ ಪಾತ್ರೆಯನ್ನು ಬಳಸಬಹುದೇ?

ಯೇಸು ಮತನಾಡಿ "ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತ" (ಲೂಕ 22:20). ಗ್ರೀಕ್ ವ್ಯಾಕರಣದ ಪ್ರಕಾರ, ಪಾತ್ರೆಯಲ್ಲಿ ಸುರಿದದ್ದು ಆತನ ರಕ್ತವಾಗಿರಲಿಲ್ಲ, ಅದು ಯೇಸುವಿನ ರಕ್ತಕ್ಕೆ ಗುರುತಾಗಿತ್ತು. "ವ್ಯಾಕರಣದ ಪ್ರಕಾರ [ಸುರಿಯಲ್ಪಟ್ಟದ್ದು] [ಪಾತ್ರೆಗೆ] ಸಂಬಂಧ ಪಟ್ಟ ಪದವಾಗಿದೆ. ಅದು ರಕ್ತಕ್ಕೆ ಸೂಚನೆಯಾಗಿದೆ.[2] ಈ ವ್ಯಾಖ್ಯಾನದಲ್ಲಿ ಯೇಸುವಿನ ರಕ್ತ ಕ್ರೂಜಿಯಲ್ಲಿ ಸುರಿಯಿತು ಎಂಬ ಅರ್ಥವಾಗಿದೆ. ಅಪೊಸ್ತಲರು ಕುಡಿದ ಪಾತ್ರೆಯಿಂದ ಸುರಿಯಲ್ಪಟ್ಟ ಪಾನವಾಗಿರಲಿಲ್ಲ.

ಪೌಲನು ಕೊರಿಂಥದವರಿಗೆ ಬರೆಯುವಾಗ, "... ಪಾತ್ರೆಯನ್ನು ಕುಡಿಯಿರಿ" ಎಂದರೆ ಅಕ್ಷರಶಃ ಪಾನವಲ್ಲ (1 ಕೊರಿಂಥ 10:21; 11:25-28). ಪಾತ್ರೆಯನ್ನೇ ಕುಡಿಯುವದಿಲ್ಲ. ಪಾತ್ರೆ ಎಂದರೆ ಮಾತಿನ ಭಾಷೆಯಷ್ಟೆ ಅವನು "ಪಾತ್ರೆಯನ್ನು ಪೂರ್ಣವಾಗಿ ತಿಂದನು" ಎಂದರೆ ಪಾತ್ರೆಯಲ್ಲಿರುವದನ್ನು ತಿಂದನು ಎಂಬ ಅರ್ಥವಾಗಿದೆ. ಉದಾಹರಣೆ "ಮಗು ಬಾಟಲಿಯನ್ನು ಕುಡಿಯಿತು" ಎಂದರೆ ಮಗು ಬಾಟಲಿಯಲ್ಲಿರುವ ಹಾಲನ್ನು

ಕುಡಿಯಿತು ಎಂಬ ಅರ್ಥವಾಗಿದೆ.

"ಈ ಪಾತ್ರೆ" ಎಂದು ಯೇಸು ಹೇಳಿದಾಗ, "ಪಾತ್ರೆಯಲ್ಲಿರುವ ಪಾನ ಎಂಬ" ಅರ್ಥ ಅದನ್ನು ಆತನು ತನ್ನ ಕೈಯಲ್ಲಿ ಹಿಡಿದಿದ್ದನು (ಲೂಕ 22:20; 1 ಕೊರಿಂಥ 11:25). ಒಂದು ವೇಳೆ ಆತನು ಪಾತ್ರೆಯಲ್ಲಿರುವದಲ್ಲ, ಪಾತ್ರೆಯೇ ಎಂದು ಹೇಳಿದರೆ, ಅದು ಬರಿ ಪಾತ್ರೆಯೇ ಆಗಿರುತ್ತಿತ್ತು. ಲೋಕದ ಪ್ರತಿಯೊಂದು ಸಭೆಯು ಸಹ ಯೇಸು ತನ್ನ ಕೈಯಲ್ಲಿ ಹಿಡಿದಿದ್ದ ಪಾತ್ರೆಯನ್ನೇ ಬಳಸುವ ಸಂದರ್ಭ ಉಂಟಾಗುತ್ತಿತ್ತು.

ಕರ್ತನ ಪಾತ್ರೆಯೆಂದರೆ 1 ಕೊರಿಂಥ 10:21 ರ "ದೆವ್ವಗಳ ಪಾತ್ರೆ" ಎಂಬ ಅರ್ಥವಲ್ಲ. ಕುಡಿಯುವ ದ್ರವದ ಕುರಿತಾಗಿದೆಯೇ ವಿನಃ, ಪಾತ್ರೆಯ ಕುರಿತಾಗಿರುವದಿಲ್ಲ. ಅನ್ಯರು ಕುಡಿದ ಪಾತ್ರೆಯನ್ನು ದೆವ್ವಗಳ ಆರಾಧನೆಯಲ್ಲಿ ಬಳಸುತ್ತಿದ್ದರು. ಕರ್ತನ ಪಾತ್ರೆಯೆಂದರೆ ಅದರಲ್ಲಿರುವ ಪಾನ - ಎಂಬ ಅರ್ಥವಾಗಿದೆ. ಕ್ರೈಸ್ತರೆಲ್ಲರು ಸಾರ್ವತ್ರಿಕವಾಗಿ ಕುಡಿಯುವ - ಪಾನವೇ ಹೊರತು, ನಿಖರವಾದ ಪಾತ್ರೆಯಾಗಿರುವದಿಲ್ಲ.

"ಪಾತ್ರೆ" ಯೆಂದರೆ, ದ್ರಾಕ್ಷೆಯ ರಸ ಎಂಬುದು ಯೇಸುವಿನ ಅರ್ಥವಾಗಿದೆ. ಅದು ನಿಖರವಾದ ಪಾತ್ರೆಯಾಗಿರುವದಿಲ್ಲ, ಅದನ್ನೆ ಅಪೊಸ್ತಲರು ಪಾನ ಮಾಡಬೇಕಿತ್ತು. ದ್ರಾಕ್ಷಾರಸದಲ್ಲಿ ಪಾಲುಗಾರರಾಗುವಾಗ, ಸುವಾರ್ತೆಗಳಲ್ಲಿ ತಿಳಿಸಿರುವ ಪ್ರಕಾರ ಹೊಸ ಒಡಂಬಡಿಕೆಯ ರಕ್ತದ ನೆನಪಾಗುತ್ತದೆ (ಮತ್ತಾಯ 26:28; ಮಾರ್ಕ 14:24; ಲೂಕ 22:20).

ದೇವರು ಇಸ್ರಾಯೇಲ್ಯರೊಂದಿಗೆ ಮಾಡಿಕೊಂಡ ಮೊದಲ ಒಡಂಬಡಿಕೆಯು ರಕ್ತದಿಂದ ಸ್ಥಾಪಿತವಾಯಿತು (ಇಬ್ರಿಯ 9:18). ಯೇಸುವಿನ ರಕ್ತಕ್ಕೆ ಗುರುತಾದ ಪಾನ ಪಾತ್ರೆಯಿಂದ ದೇವರು ಹೊಸ ಒಡಂಬಡಿಕೆಯನ್ನು ರೂಪಿಸಿದನು.

ಆ ಪಾನ "ಪಾತ್ರೆಯು" ಸಕಲ ಜನಾಂಗದವರಿಗೂ, ಸಕಲ ಸಮಯಕ್ಕೂ, ಬಳಸಬಹುದಾದ ಒಂದೇ ಪಾತ್ರೆಯಾಗಿರುತ್ತದೆ. ಯಾಕೋಬನ ಬಾವಿಯಿಂದ (ಯೋಹಾನ 4:12) ನೀರು ಸೇದುವದಕ್ಕೆ ಅನೇಕ ಪಾತ್ರೆಗಳನ್ನು ಬಳಸಿದ ಹಾಗೆ (ಯೋಹಾನ 4:12), ಯೇಸುವಿನ ಆ ಒಂದು ಪಾನವನ್ನು ಮಾಡಲು ಅನೇಕ ಪಾತ್ರೆಗಳನ್ನು ಅಂದರೆ ವ್ಯಕ್ತಿಗತವಾಗಿ ಒಂದು, ಅಥವಾ ಪೂರ್ಣ ಸಭೆಗೆ ಒಂದು ಪಾತ್ರೆಯನ್ನು ಬಳಸಬಹುದಾಗಿದೆ.

ಸಭೆಯು ಒಂದೇ ಪಾತ್ರೆಯಲ್ಲಿ ಕುಡಿಯಬಹುದಾದರೂ, ಒಂದೇ ಪಾತ್ರೆಯನ್ನು ಬಳಸಬೇಕು ಎಂಬ ಸಂಪ್ರದಾಯ ಬೋಧನೆಯು ಹೊಸ ಒಡಂಬಡಕೆಯಲ್ಲಿ ಇರುವದಿಲ್ಲ. "ಒಂದು ವೇಳೆ, ಎಲ್ಲರೂ ಒಂದೇ ಪಾತ್ರೆಯಲ್ಲಿ," ಕುಡಿಯಬೇಕೆಂಬ ನಿಯಮವನ್ನು ಹೊಸ ಒಡಂಬಡಿಕೆಯು ನೀಡಿದ್ದರೆ ಮಾತ್ರ ಒಂದೇ ಪಾತ್ರೆಯನ್ನು ಬಳಸಬಹುದಿತ್ತು. ಎಷ್ಟು ಪಾತ್ರೆಗಳನ್ನು ಬಳಸಬೇಕೆಂಬ ನಿಯಮವು ಇಲ್ಲದೆ ಇರುವದರಿಂದ, ಸಭೆಯ ಈ ವಿಚಾರದಲ್ಲಿ ಸ್ವಂತ ನಿರ್ಣಯವನ್ನು ತೆಗೆದು ಕೊಳ್ಳಬಹುದಾಗಿದೆ.

## ಒಂದು ಅಥವ ಅದಕ್ಕಿಂತ ಹೆಚ್ಚಿನ ರೊಟ್ಟಿಗಳನ್ನು ಬಳಸಬಹುದೇ?

ಯೇಸು ಒಂದೇ "ಒಂದು ದೇಹವನ್ನು" ಹೊಂದಿದ್ದಾನೆ, ಅದರಲ್ಲಿ ಸಕಲ ಸಭೆಗಳು ಅಡಕವಾಗಿವೆ. ಆದ್ದರಿಂದ, ಆತನ ಸಕಲ ಸಭೆಗಳು ಒಟ್ಟಾಗಿ ಆ ದೇಹವನ್ನು ಉಪಯೋಗಿಸುತ್ತವೆ. 1 ಕೊರಿಂಥ 10:16, 17ರಲ್ಲಿ ಪೌಲನು "ಒಂದೇ ರೊಟ್ಟಿಯನ್ನು" ಒಂದೇ ದೇಹವೆಂಬ ಸಭೆಯು ಬಳಸಬೇಕು ಎಂದು ಹೇಳುತ್ತಿರುವದಿಲ್ಲ. ಅದರ ಬದಲಾಗಿ ಪ್ರಪಂಚದಾದ್ಯಂತ ಚದುರಿಸುವ ಸಭೆಗಳು ಒಂದೇ ದೇಹವೆಂಬ, ಅನೇಕ ರೊಟ್ಟಿಗಳನ್ನು ಬುಜಿಸುತ್ತಾರೆ. R. C. H. Lenski ಲೆನ್‌ಸ್ಕಿಯ ಪ್ರಕಾರ, "ಸಂಪೂರ್ಣವಾದ ರೊಟ್ಟಿಯನ್ನು ಸಕಲ ಕ್ರೈಸ್ತರು, ಸಾಮೂಹಿಕವಾಗಿ ಬುಜಿಸುವರು, ಆ ಪೂರ್ಣವಾದ ರೊಟ್ಟಿಯನ್ನು *'ಇಸ್ ಆರ್ಟೋಸ್'* [ಒಂದೇ ರೊಟ್ಟಿ] ಎಂದಿರುವರು."[3]

ಈ ವಿಚಾರದಲ್ಲಿ ದೇವರು ನಿಖರವಾಗಿ ಹೇಳದೆ ಇರುವದರಿಂದ, ಸಭೆಯವರು, ಅನೇಕ ರೊಟ್ಟಿಗಳನ್ನು ಪಾತ್ರೆಗಳನ್ನು ಬಳಸಬಹುದಾಗಿದೆ. ರೊಟ್ಟಿ ಮತ್ತು ದ್ರಾಕ್ಷಾರಸವು ಪ್ರಮುಖವೇ ಹೊರತು, ಅನೇಕ ರೊಟ್ಟಿಗಳು ಹಾಗೂ ಪಾತ್ರೆಗಳು ಪ್ರಮುಖವಲ್ಲ. ಯೆರೂಸಲೇಮಿನ ಸಭೆಯಲ್ಲಿ ಸೇರಿ ಬಂದ ಸಾವಿರಾರು ಸದಸ್ಯರಿಗೆ ಸರಭರಾಜು ಮಾಡಲು ಅನೇಕ ರೊಟ್ಟಿಗಳ ಹಾಗೂ ಪಾತ್ರೆಗಳ ಅಗತ್ಯತೆ ಇತ್ತು (ಅಪೊಸ್ತಲರ ಕೃತ್ಯಗಳು 2:41; 4:4) ಅವರು ಸೊಲೋಮೋನನ ಮಂಟಪದಲ್ಲಿ ಸೇರಿ ಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 5:12).

ಯೇಸು, ಕರ್ತನ ಭೋಜನವನ್ನು ನೀಡಿದಾಗ, ಪ್ರತಿಯೊಬ್ಬರಿಗೆ ವ್ಯಕ್ತಿಗತವಾದ ಪಾನ ಪಾತ್ರೆಯನ್ನು ನೀಡಿದನು. ಪಸ್ಕ ಹಬ್ಬದ ಭೋಜನದಲ್ಲಿ ಇದೇ ವಿಧವಾದ ಆಚರಣೆಯಿತ್ತು ಎಂಬುದಕ್ಕೆ ಇದು ಪುರಾವೆಯಾಗಿದೆ.

## ಕರ್ತನ ಭೋಜನದ ಸಂದರ್ಭದಲ್ಲಿ ಹಾಡಬಹುದೇ?

ಕೆಲವು ಸಭೆಯವರು ಹಾಡುವ ಅಭ್ಯಾಸವನ್ನು ಮಾಡಿಕೊಂಡಿದ್ದಾರೆ. ಈ ಆಚರಣೆಯ ಬಗ್ಗೆ ಎರಡು ಸಂಗತಿಗಳನ್ನು ಗಮನಿಸೋಣ.

ಮೊದಲನೆಯದಾಗಿ, ಆರಾಧನೆಯ ಸಮಯದಲ್ಲಿ ಒಬ್ಬನು ಮಾತ್ರ ಮಾತನಾಡಬೇಕಿತ್ತು (1 ಕೊರಿಂಥ 14:27-30). ಅವರು ಒಬ್ಬರ ನಂತರ, ಒಬ್ಬರು ಮಾತನಾಡಬೇಕಿತ್ತು. ಈ ಚರ್ಚೆಯ ನಂತರ ಅವನು ಬರೆದು, "ಅಂದರೆ ಎಲ್ಲವು ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ" ಎಂದನು (1 ಕೊರಿಂಥ 14:40). ಪ್ರಸಂಗಿಗಳು ಮಾತ್ರ ಒಂದು ಬಾರಿ ಮಾತನಾಡುವದಲ್ಲದೆ ಎಲ್ಲವನ್ನು ಕ್ರಮದಿಂದ ನಡೆಸಬೇಕಿತ್ತು. "ಕ್ರಮ" ಎಂಬ ಪದವು *"ಟ್ಯಾಕ್ಸಿಸ್,"* ಎಂಬ ಮೂಲದ ಪದವಾಗಿದೆ. *"ಕ್ರಮಬದ್ಧವಾದ ಚಟುವಟಿಕೆ"* ಎಂಬ ಅರ್ಥ ವಾಗಿದೆ. "ಮತ್ತು ನಿಖರವಾದ ಕ್ರಮ ಆಚರಣೆ ಎಂಬುದಾಗಿದೆ."[4] ನಮ್ಮ ಆರಾಧನೆಯು ಕ್ರಮಬದ್ಧವಾಗಿರಬೇಕು. ಇತರರಿಗೆ ಉಂಟಾಗಬಹುದಾದ ಅಡಚಣೆಯನ್ನು ನಿವಾರಿಸುವ ಸಲುವಾಗಿ "ಕ್ರಮವು" ಅಗತ್ಯವಾಗಿದೆ. ಒಬ್ಬನು ಪ್ರಸಂಗಿಸುವಾಗಲೇ, ಮತ್ತೊಬ್ಬನು ಶಬ್ಧದಿಂದ ಪ್ರಾರ್ಥಿಸುವದಾದರೆ ಇತರರು ಪ್ರಸಂಗವನ್ನಾಗಲೀ ಅಥವಾ ಪ್ರಾರ್ಥನೆಯನ್ನಾಗಲೀ ಆಲಿಸಲು ಸಾಧ್ಯವಾಗದು.

ಎರಡನೆಯದಾಗಿ, ಕರ್ತನ ಭೋಜನದ ಅಥವಾ ವೈಯಕ್ತಿಕ ಧ್ಯಾನದ ಸಮಯ ಹಾಡುವದು ಅಡಚಣೆ ಉಂಟುಮಾಡಬಹುದು. ಭಕ್ತನು, ಒಂದೇ ಸಮಯದಲ್ಲಿ ಹಾಡನ್ನು ಮತ್ತು ದೇವ ಧ್ಯಾನವನ್ನು ಮಾಡಲು ಅಸಾಧ್ಯವಾಗಬಹುದು. ಕರ್ತನ ಭೋಜನದ ಮೊದಲು ಅಥವಾ ನಂತರ ಹಾಡಬಹುದು. ಅವುಗಳನ್ನು ಒಂದೇ ಬಾರಿ ಮಾಡಬಾರದು.

ಕರ್ತನ ಭೋಜನದ ಸಮಯದಲ್ಲಿ ಹಾಗೂ ಈ ಎರಡು ಗುರುತುಗಳಿಗೂ ಒಂದೇ ಪ್ರಾರ್ಥನೆ ಮಾಡುವ ನಿಯಮಗಳನ್ನು ತಿಳಿಸಿರುವದಿಲ್ಲ. ರೊಟ್ಟಿಗೂ ಮತ್ತು ಪಾತ್ರೆಗೂ ಪ್ರತ್ಯೇಕವಾದ ಪ್ರಾರ್ಥನೆಯನ್ನು ಯೇಸುವಿನ ನಿದರ್ಶನದಂತೆ ಮಾಡಬಹುದಾಗಿದೆ. ಅದರಲ್ಲಿ ಪಾಲುಗಾರರಾಗುವಾಗ, ಕರ್ತನ ಮರಣವನ್ನು ಧ್ಯಾನಮಾಡಬಹುದು.

## "ಸ್ನೇಹ ಭೋಜನವನ್ನು" ಮಾಡಬಹುದೇ?

ಯೂದ 12ನೇ ವಚನದಲ್ಲಿ ಪ್ರೇಮ ಭೋಜನದ ಕುರಿತು ಮಾಹಿತಿ ಇದೆ. ಅದನ್ನು ಯಾವಾಗ, ಹೇಗೆ ಮಾಡಬೇಕೆಂಬ ಮಾಹಿತಿ ಅಲಭ್ಯ. ಎರಡನೇ ಶತಮಾನದ ಬರಹಗಾರರ ಪ್ರಕಾರ, ಆದಿ ಸಭೆಯವರು ಭಾನುವಾರದ ನಸುಕಿನಲ್ಲಿ ಕರ್ತನ ಭೋಜನದಲ್ಲಿ ಪಾಲುದಾರ ರಾದರು. ಅವರು ಕೆಲಸಕ್ಕೆ ಹೋಗುವ ಮುನ್ನ ಸೇರಿ ಬಂದು, ನಂತರ ಸಾಯಂಕಾಲದ ಭೋಜನಕ್ಕಾಗಿ ಸೇರಿ ಬರುತ್ತಿದ್ದರು.

ಸಾಯಂಕಾಲದ ಭೋಜನಕ್ಕಾಗಿ, ದಿನದ ಅಂತ್ಯದಲ್ಲಿ ಸೇರುತ್ತಿದ್ದರು. ಒಂದು

ವೇಳೆ ಈ ಭೋಜನ "ಪ್ರೇಮ ಭೋಜನವಿರಬಹುದು" (ಯೂದ 12). ಅದು ದಿನದ ಪ್ರಮುಖವಾದ ಊಟವಾಗಿತ್ತು.[5]

ಈ ಪ್ರೇಮ ಭೋಜನದ ಸಮಯದಲ್ಲಿ ಕರ್ತನ ಭೋಜನವನ್ನು ಸೇವಿಸುತ್ತಿರಲಿಲ್ಲ. ಟೆರ್ಟುಲಿಯನ ಪ್ರಕಾರ ಕರ್ತನ ಭೋಜನವು ಅನ್ಯೋನ್ಯ ಭೋಜನದ ಒಂದು ಭಾಗವಾಗಿತ್ತು ಎಂದು ಸಹ ಗಮನಿಸುತ್ತೇವೆ.[6]

ಎವರೆಟ್ ಫಲ್‌ಗೂಸನ್‌ರವರು ಬರೆದು, ಸಾಮಾನ್ಯ ಭೋಜನದ ಸಂಗಡ ಕರ್ತನ ಭೋಜನವನ್ನು ಆಚರಿಸಿದರು ಎಂದು ಚರಿತ್ರೆ ತಿಳಿಸುತ್ತದೆ ಎಂದಿರುವರು. "ಸಾಮಾಜಿಕ ಭೋಜನದ ಸಂಗಡ *ಡಿಡಾಚ್ಚೆ* ಯಲ್ಲಿ, ಕರ್ತನ ಭೋಜನವೂ ಇತ್ತು ಎಂದೇ. ಇದು ಆದಿ ಸಭೆಯ ಒಂದು ಕ್ರಮವಾಗಿರಬಹುದು."[7]

ಈ ಅಂಶವನ್ನು ಫಿಲಿಪ್ ಸ್ಕಾಫ್‌ರವರು ತಿಳಿಸಿ:

ಮೊದಲು ಕರ್ತನ ಭೋಜನವು **ಪ್ರೇಮ ಭೋಜನದ**, ಸಂಗಡ ನೆರವೇರಿಸಲಾಗುತ್ತಿತ್ತು. ಯೇಸು ತನ್ನ ಶಿಷ್ಯರ ಸಂಗಡ ಮಾಡಿದ ಕಡೇ ಭೋಜನದ ನೆನಪಿನಾರ್ಥವಾಗಿ ಸಾಯಂಕಾಲದಲ್ಲಿ ಆಚರಿಸುತ್ತಿದ್ದರು. ಎರಡನೆಯ ಶತಮಾನದ ಆರಂಭದಲ್ಲಿ ಇವೆರಡು ಕ್ರಮಗಳನ್ನು ಪ್ರತ್ಯೇಕ ಮಾಡಲಾಯಿತು, ಮುಂಜಾನೆಯಲ್ಲಿ ಕರ್ತನ ಭೋಜನ, ಸಾಯಂಕಾಲದಲ್ಲಿ ಪ್ರೇಮ ಭೋಜನವನ್ನು ಆಚರಿಸಲಾಯಿತು.[8]

ಫರ್‌ಗೂಸನ್ ಮತ್ತು ಸ್ಕಾರ್ಫ್ ಅಥವಾ ಇತರೆ ಪ್ರೇರಿತರಾದ ಜನರು, ಅಪೊಸ್ತಲರು, ಪ್ರೇಮ ಭೋಜನ ಹಾಗೂ ಕರ್ತನ ಭೋಜನವನ್ನು ಒಂದೇ ಸಮಯದಲ್ಲಿ ಆಚರಿಸಿದರು ಎಂಬ ದಾಖಲೆಗಳನ್ನು ನೀಡಿರುವದಿಲ್ಲ. ಕರ್ತನ ಹಾಗೂ ಪ್ರೇಮ ಭೋಜನಕ್ಕೂ ನಡುವೆ ವ್ಯತ್ಯಾಸವಿದೆ ಎಂಬ ಅಂಶವನ್ನು ಪೌಲನು ಸ್ಪಷ್ಟ ಪಡಿಸಿರುವನು (1 ಕೊರಿಂಥ 11:20-26, 33, 34), ಪ್ರೇಮ ಭೋಜನದೊಂದಿಗೆ, ಕರ್ತನ ಭೋಜನವನ್ನು ಸಹ ತೆಗೆದುಕೊಳ್ಳುವದು ಮನುಷ್ಯನ ಯೋಚನೆಯೇ ಹೊರತು ಅದು ದೇವರಿಂದ ಬಂದದ್ದಲ್ಲ.

ಸಾಧಾರಣ ಊಟಕ್ಕಿಂತ, ಕರ್ತನ ಭೋಜನ ವ್ಯತ್ಯಾಸವುಳ್ಳದ್ದು ಎಂಬ ತತ್ವವನ್ನು ಪೌಲನು ಕೊರಿಂಥದವರಿಗೆ ಸ್ಪಷ್ಟಪಡಿಸಿರುವನು. ಕ್ರೈಸ್ತರು ತಮ್ಮ ಊಟವನ್ನು ತಮ್ಮ ಮನೆಗಳಲ್ಲಿ ಮಾಡಬೇಕೇ ವಿನಃ, ಕರ್ತನ ಭೋಜನದೊಂದಿಗೆ ತೆಗೆದುಕೊಳ್ಳಬಾರದು ಎಂದು ಪೌಲನು ಬರೆದಿರುವನು. "ಏನು! ಉಣ್ಣುವದಕ್ಕೂ ಕುಡಿಯುವದಕ್ಕೂ ಮನೆಗಳಿಲ್ಲದೇ? ಇದ್ದೀರ, ಅಥವಾ ದೇವರ ಸಭೆಯನ್ನು ಅಸಡ್ಡೆ ಮಾಡಿ ಏನೂ ಇಲ್ಲದವರನ್ನು ನಾಚಿಕೆ ಪಡಿಸುತ್ತೀರಾ?" (1 ಕೊರಿಂಥ 11:22ಎ); "ಒಬ್ಬನು ಹಸಿದರೆ ಮನೆಯಲ್ಲೇ ಊಟ ಮಾಡಲಿ, ನೀವು ಕೂಡಿ ಬಂದದ್ದು ನ್ಯಾಯ ತೀರ್ಪಿಗೆ ಒಳಗಾಗುವದಕ್ಕೆ ಕಾರಣವಾಗಬಾರದು" (1 ಕೊರಿಂಥ 11:34ಎ).

ಪ್ಲಿನಿ ಎಂಬಾತನು ಟ್ರಾಜಾನ್‌ಗೆ ಬರೆದು, ಕ್ರೈಸ್ತರು ಆರಾಧನೆಗಾಗಿ ನಸುಕಿನಲ್ಲಿ ಸೇರಿ ಬಂದು, ಸಾಮಾನ್ಯ ಭೋಜನಕ್ಕಾಗಿ ಸಾಯಂಕಾಲ ಸೇರಿಬರುತ್ತಿದ್ದರು. "... ಕ್ರೈಸ್ತರು ಅವರಿಗೆ ನಿಗಧಿತವಾದ (ಭಾನುವಾರದ) ದಿನದ ಮುಂಜಾನೆ ಸೇರಿ ಬಂದು ನಂತರ (ಸಾಯಂಕಾಲದಲ್ಲಿ) ಸಾಮಾನ್ಯವಾದ ಭೋಜನಕ್ಕಾಗಿ ಸೇರಿ ಬರುತ್ತಿದ್ದರು."[9]

ಮೊದಲ ಶತಮಾನದಲ್ಲಿ ಕರ್ತನ ಭೋಜನ ಹಾಗೂ ಪ್ರೇಮ ಭೋಜನವನ್ನು ಅವರು ಒಂದೇ ದಿನದಲ್ಲಿ ಮಾಡಿದ್ದರು ಅದನ್ನು ಆ ದಿನದ ಬೇರೆ ಬೇರೆ ಸಮಯಗಳಲ್ಲೇ ಮಾಡಿದ್ದರು. ಕರ್ತನ ಭೋಜನದೊಂದಿಗೆ, ಪ್ರೇಮ ಭೋಜನವನ್ನು ಸಹ ಮಾಡಬೇಕೆಂಬ ಯಾವುದೇ ಸಲಹೆ ಸೂಚನೆಗಳನ್ನು ನೀಡಿರುವದಿಲ್ಲ. ಅವರು ಅದನ್ನು ಮಿಶ್ರ ಮಾಡುವದು ತಪ್ಪಿನ ಅಂಶವಾಗುತ್ತದೆ.

ಪಸ್ಕದ ಊಟದ ಸಮಯದಲ್ಲೇ, ಕರ್ತನ ಭೋಜನವನ್ನು ಮಾಡಿದ್ದೇ ಆದರೂ ಸಾಧಾರಣ ಊಟದೊಂದಿಗೆ ಕರ್ತನ ಭೋಜನವನ್ನು ಮಾಡಬೇಕೆಂಬದು ಯೇಸುವಿನ ಬೋಧನೆಯಾಗಿರುವದಿಲ್ಲ. ಪಸ್ಕದ ಊಟವು ನೆನಪಿನ ಊಟವೇ ವಿನಃ ಒಡಂಬಡಕೆಯ ಊಟವಾಗಿರುವದಿಲ್ಲ.

I. ಹವಾರ್ಡ್ ಮಾರ್ಷಲ್‌ರವರು ಯೆಹೂದ್ಯರ *ಕಿದ್ದೂಶ್,* ಅಥವಾ ಆಶೀರ್ವಾದ ಭೋಜನದ ಕುರಿತು:

> ಕರ್ತನ ಭೋಜನಕ್ಕೆ [*ಕಿದ್ದೂಶ್*] ಎಂಬ ಭೋಜನವು ಒಂದು ಮಾದರಿಯಾಗಿತ್ತು. ಆ ವಿಶೇಷವಾದ ಯೆಹೂದ್ಯರ ಭೋಜನವು ಸಾಮಾನ್ಯ ಭೋಜನವೇ ಆಗಿತ್ತು ಎಂಬುದಕ್ಕೆ ಪುರಾವೆಗಳಿರುವದಿಲ್ಲ ಎಂದು ಪಂಡಿತರುಗಳ ತರ್ಕವಾಗಿದೆ. ಆದ್ದರಿಂದ ಕರ್ತನ ಭೋಜನದ ಕುರಿತ ತರ್ಕವನ್ನು ಮೊಟಕುಮಾಡಬಾರದು.
>
> ಕರ್ತನ ಭೋಜನವು ಕಿದ್ದೂಶ್ ಎಂಬ ಭೋಜನಕ್ಕೆ ಸಮಾನವಾದದ್ದು ಎಂದು ಹೇಳಲು ಅಸಾಧ್ಯವಾಗಿದೆ. ಯಾಕಂದರೆ ಸಬ್ಬತ್ತಿನ *ಕಿದ್ದೂಶ್* ಭೋಜನವು ಶುಕ್ರ ವಾರ ಸಂಜೆ ನಡೆಯುವ ಆಚರಣೆ ಎಂದು ನಮಗೆ ತಿಳಿದು ಬಂದಿರುತ್ತದೆ ಆದರೆ ಯೇಸು ಕರ್ತನ ಭೋಜನವನ್ನು ಗುರುವಾರ ಸಂಜೆ ಮಾಡಿರುವದು ಕಂಡು ಬರುತ್ತದೆ. *ಕಿದ್ದೂಶ್* ಭೋಜನದ ಸಂಗತಿಯು ಊಹೆಯೇ ಆಗಿರಬಹುದು.[10]

ಬಹುಶಃ ಯೆರೂಸಲೇಮಿನ ಸಭೆಯವರು ದೇವಾಲಯದ ಸೊಲೋಮೋನನ ಮಂಟಪದಲ್ಲಿ ಸಭೆಯಾಗಿ ಸೇರಿ ಬಂದಿರಬಹುದು (2:46ಎ; 5:12ಬಿ). "ಅವರು ಮನೆಮನೆಗಳಲ್ಲಿ ರೊಟ್ಟಿ ಮುರಿಯುತ್ತಿದ್ದರು" (ಅಪೊಸ್ತಲರ ಕೃತ್ಯಗಳು 2:42, 46ಬಿ). ರೊಟ್ಟಿ ಮುರಿದರು ಎಂಬ ವ್ಯಾಖ್ಯಾನವು ಬೋಧನೆ, ಅನ್ಯೋನ್ಯತೆ, ಪ್ರಾರ್ಥನೆ ಹಾಗೂ ಆರಾಧನೆಯ ಸೇವೆಯ ಸಾಲಿನಲ್ಲಿ ಸೇರಿರುತ್ತದೆ. ಆದ್ದರಿಂದ ಹಳೆಯ ಹೇಳಿಕೆಯಾದ "ಪರಿಶುದ್ಧ ಭೋಜನ ಎಂಬುದನ್ನು ಸರಳವಾಗಿ ಅರ್ಥಮಾಡಿಕೊಳ್ಳುತ್ತೇವೆ."[11]

ಸಭೆಯವರು ಸಾಮಾನ್ಯ ಭೋಜನವನ್ನು ತಮ್ಮ ತಮ್ಮ ಮನೆಗಳಲ್ಲೆ ಮಾಡುತ್ತಿದ್ದರು, ಅದರ ಸಂಗಡ ಕರ್ತನ ಭೋಜನವನ್ನು ಮಾಡಲಿಲ್ಲ. ಯೆರೂಸಲೇಮಿನ ದೇವ ಜನರು "ಈ ಭೋಜನದಲ್ಲಿ ಪ್ರತಿದಿನ ಆನಂದಿಸುತ್ತಿದ್ದರು (ವಚನ 46ಎ), ಆದ್ದರಿಂದ ನಾವುಗಳು ಕರ್ತನ ಭೋಜನ ಹಾಗೂ ಸಾಮಾನ್ಯ ಭೋಜನದ ನಡುವಿನ ವ್ಯತ್ಯಾಸವನ್ನು ಕಂಡುಕೊಳ್ಳ ಬೇಕು."[12] ಒಂದು ಸಂಗತಿ ಬಹು ಸ್ಪಷ್ಟವಾಗಿದೆ ಏನೆಂದರೆ ಕರ್ತನ ದೇಹದ ಮೊದಲನೆಯ ಯೆರೂಸಲೇಮಿನ ಸಭೆಯು, ಸಾಮಾನ್ಯ ಭೋಜನದ ಸಂಗಡ ಕರ್ತನ ಭೋಜನವನ್ನು ಮಿಶ್ರ ಮಾಡಲಿಲ್ಲ.

## ಕರ್ತನ ಭೋಜನದಂತೆ ಕಾಲುಗಳನ್ನು ತೊಳೆಯುವ ವಿಚಾರದ ಕುರಿತು ಏನನ್ನು ತಿಳಿಯಬಹುದು?

ಕೆಲವರು ಕರ್ತನ ಭೋಜನವನ್ನು, ಕಾಲು ತೊಳೆಯುವ ಸಂಗತಿಯೊಂದಿಗೆ ಮಿಶ್ರ ಮಾಡುತ್ತಾರೆ. ಕಾಲುಗಳನ್ನು ತೊಳೆಯುವದು ಧಾರ್ಮಿಕ ಪದ್ಧತಿಯಾಗಿರಲಿಲ್ಲ ಆದರೆ ಕೊಳಕಾದ ಕಾಲುಗಳನ್ನು ತೊಳೆಯುವ ಕ್ರಿಯೆಯು ದಿನದ ಕಾರ್ಯವಾಗಿರುತ್ತದೆ. ಹಾಗೆಯೇ ಸಭೆಯ ಬಡ ವಿಧವೆಯು ಸಭೆಯಿಂದ ಪಡೆಯುವ ಸಹಾಯಕ್ಕೆ ಯೋಗ್ಯಳಾಗಿರುವಳು, ಇತರೆ ಸೇವೆಗಳೊಂದಿಗೆ ಇದ ಸಹ ಒಂದು ಸೇವೆ ಆಗಿರುತ್ತದೆ (1 ತಿಮೊಥೆ 5:10). ಇದು ಆರಾಧನೆಯ ಧ್ಯೋತಕವಾಗಿರದೆ, ಅತಿಥಿ ಸತ್ಕಾರ್ಯದ ಒಂದು ಕ್ರಿಯೆಯಾಗಿದೆ.

ಒಂದು ವೇಳೆ ಪಾದಗಳನ್ನು ತೊಳೆಯುವದು, ಆರಾಧನೆಯ ಚಟುವಟಿಕೆಯಾಗಿದ್ದರೆ, ಅದರ

ಕುರಿತು, ಹೇಗೆ ಎಲ್ಲಿ ಎಂಬುದನ್ನು ಹೊಸ ಒಡಂಬಡಿಕೆಯು ತಿಳಿಸಿರುವದಿಲ್ಲ. ಆದ್ದರಿಂದ ಈ ಕ್ರಿಯೆಯು ದೀನತೆಯ ಕ್ರಿಯೆಯೇ ಹೊರತು ಆರಾಧನೆಯ ಕ್ರಿಯೆಯಲ್ಲ ಎಂದು ಯೇಸು ಸ್ಪಷ್ಟ ಪಡಿಸಿರುವನು.

"ನಾನು ಒಂದು ನಿದರ್ಶನವನ್ನು ನೀಡಿರುವದರಿಂದ, ನೀವುಗಳು ಅದನ್ನು ಪಾಲಿಸಬೇಕು ಎಂದು" ಯೇಸು ತಿಳಿಸಿರುವದಿಲ್ಲ. ಆದರೆ "ನಾನು ಮಾಡಿರುವ ಹಾಗೆ (ಯೋಹಾನ 13:15) ಎಂದಿರುವನು." ಆತನು ಅವರ ಪಾದಗಳನ್ನು ತೊಳೆದು ದೀನತೆಯ ಸೇವೆಯನ್ನು ತೋರಿ ದಂತೆ ಇತರರು ತೋರಬೇಕು. ಈ ವಿಧವಾದ ಮನೋಭಾವಕ್ಕೆ ಈ ಕ್ರಿಯೆಯ ಸೀಮಿತ ವಾಗಿದೆಯಷ್ಟೆ.

## ಸಾರಾಂಶ

ಯೇಸುವನ್ನು ಮೆಚ್ಚಿಸಲು ಬಯಸುವವರು, ಆತನ ವಾಕ್ಯಗಳನ್ನು ಆಳವಾಗಿ ಅಧ್ಯಯನ ಮಾಡಿ, ಅದರ ಪ್ರಕಾರವೇ ಬದುಕಬೇಕು. ಅದು ಕ್ರೈಸ್ತರ ಸಕಲ ಚಟುವಟಿಕೆಗೂ, ಅಂದರೆ ಕರ್ತನ ಭೋಜನಕ್ಕೂ ಸಹ ಅನ್ವಯಿಸುತ್ತದೆ ಕ್ರೈಸ್ತ ಯುಗದವರೆಲ್ಲರೂ, ಆತನ ವಾಕ್ಯದ ಪ್ರಕಾರವಾಗಿ ನ್ಯಾಯ ತೀರ್ಪಿಗೆ ಒಳಗಾಗುವರೇ (ಯೋಹಾನ 12:48) ವಿನ ಮನುಷ್ಯರ ಅಭಿಪ್ರಾಯ, ಸಂಪ್ರದಾಯ, ಹಾಗೂ ಮಾನವರ ಬೋಧನೆಗಳಿಂದ ತೀರ್ಪಿಗೆ ಒಳಗಾಗುವದಲ್ಲ.

ಟಿಪ್ಪಣಿಗಳು

[1]Paul M. Blowers and Byron C. Lambert, *The Encyclopedia of the Stone-Campbell Movement,* ed. Douglas A. Foster, Paul M. Blowers, Anthony L. Dunnavant, and D. Newell Williams (Grand Rapids, Mich.: Wm. B. Eerdmans Publishing Co., 2004), 491. [2]J. Reiling and J. L. Swellengrebel, *A Translator's Handbook on the Gospel of Luke* (New York: United Bible Societies, 1971), 688. [3]R. C. H. Lenski, *The Interpretation of St. Paul's First and Second Epistle to the Corinthians* (Columbus, Ohio: Wartburg Press, 1946), 412. [4]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 989. [5]Everett Ferguson, *Early Christians Speak* (Abilene, Tex.: Biblical Research Press, 1981), 84; Pliny *Letters* 10.96. [6]Ferguson, 85. [7]Ibid., 99. [8]Philip Schaff, *History of the Christian Church,* vol. 1 (New York: Charles Scribner and Co., 1869), 395. [9]Ibid., 382. [10]I. Howard Marshall, *Last Supper and Lord's Supper* (Grand Rapids, Mich.: Wm. B. Eerdmans Publishing Co., 1980), 20.

[11]Simon J. Kistemaker, *New Testament Commentary*, Exposition of the Acts of the Apostles (Grand Rapids, Mich.: Baker Book House, 1990), 111. [12]Ibid., 113.

## "ಒಡಂಬಡಿಕೆಯ ಭೋಜನಕ್ಕೂ" ಕರ್ತನ ಭೋಜನಕ್ಕೂ ಸಂಬಂಧವಿದೆಯೇ?

ಹಳೆ ಒಡಂಬಡಿಕೆಯಲ್ಲಿನ ಒಡಂಬಡಿಕೆಯ ಭೋಜನವನ್ನು ಕರ್ತನ ಭೋಜನದೊಂದಿಗೆ ಕೆಲವರು ಹೋಲಿಸಿದ್ದಾರೆ. ಈ ಊಟದೊಂದಿಗೆ ಮನುಷ್ಯರ ಕೆಲವು ಒಡಂಬಡಿಕೆಗಳು ಸಹ ಒಳಗೊಂಡಿವೆ. ಅಭಿಮೆಲೆಕನು ಹಾಗಿ ಇಸಾಕನು ಸೇರಿ ಸಹ ಭೋಜನ ಮಾಡಿದ ಮೂಲಕ, ಅವರು ತಮ್ಮಲ್ಲಿದ್ದ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳುವಂಥ ಸಂಧಾನವನ್ನು ಮಾಡಿಕೊಂಡರು (ಆದಿಕಾಂಡ 26:26-31). ಕಲ್ಲು ಕುಪ್ಪೆಯನ್ನು ಮಾಡುವ ಮೂಲಕ ಯಾಕೋಬ ಹಾಗೂ ಲಾಬಾನರು ಯಜ್ಞವನ್ನು ಮಾಡಿ ಸಂಧಾನ ಮಾಡಿಕೊಂಡರು (ಆದಿಕಾಂಡ 31:44-54).

"ದೂರದಿಂದಲೇ ಆತನನ್ನು ಆರಾಧಿಸುವದಕ್ಕಾಗಿ" ದೇವರು ಮೋಶೆ, ಆಲೋನ,

ನಾದಾಬ, ಅಬಿಹುವನ್ನು ಹಾಗು ಇಸ್ರಾಯೇಲ್ಯರ ಎಪ್ಪತ್ತು ಮಂದಿ ಹಿರಿಯರನನ್ನು ಕರೆದನು (ವಿಮೋಚನಕಾಂಡ 24:1).ಆದರೆ ಈ ಸಂಗತಿಗಳಿಗೂ, ಹಾಗೂ ಒಡಂಬಡಿಕೆಗೂ ಯಾವುದೇ ಸಂಬಂದಗಳಿರಲಿಲ್ಲ ಎಂದು ಗ್ರಂಥಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಅವರು ಒಡಂಬಡಿಕೆ ಮಾಡಿಕೊಂಡನಂತರ, ಬೆಟ್ಟದಲ್ಲಿ ಕರ್ತನ ಮುಂದೆ ಪಾನ ಆಹಾರಗಳನ್ನು ತೆಗೆದಕೊಂಡರು (ವಿಮೋಚನಕಾಂಡ 24:3-11). ತದನಂತರ  ಮೋಶೆ, ಆರೋನರು ಬೆಟ್ಟಕ್ಕೆ ತೆರಳಿ, ದಶಾಜ್ಞೆಗಳಿದ್ದ ಕಲ್ಲಿನ ಹಲಿಗೆಗಳನ್ನು ಪಡೆದುಕೊಂಡರು (ವಿಮೋಚನಕಾಂಡ 24:12-18; 34:27, 28).

ಇಸ್ರಾಯೇಲ್ಯರೆಲ್ಲರೂ ಭೋಜನ ಮಾಡುವ ಬದಲು, ಹಿರಿಯರು ಮಾತ್ರ ಒಂದೇ ಸಾರಿ ಭೋಜನ ಮಾಡಿದರು. ಈ ಭೋಜನವು ಒಡಂಬಡಿಕೆಯ ಭೋಜನದೊಂದಿಗೆ ಯಾವುದೇ ಸಂಬಂಧವನ್ನು ಹೊಂದಿರುವದಿಲ್ಲ. ಏಕೆ ಜನರೆಲ್ಲರು ಇದರಲ್ಲಿ ಪಾಲುಗಾರರಾಗಲಿಲ್ಲ?

ಕಲ್ಲಿನ ಹಲಗೆಗಳನ್ನು ಪಡೆಯುವ ಮೊದಲು, ಭಟ ಮಾಡುವ ಬದಲು ಮೋಶೆ ನಾಲ್ವತ್ತು ದಿವಸಗಳ ರಾತ್ರಿ ಹಗಲು ಉಪವಾಸ ಮಾಡಿದನು (ವಿಮೋಚನಕಾಂಡ 34:27, 28; ಧರ್ಮೋಪದೇಶಕಾಂಡ 9:9, 11, 18, 25). ಉಪವಾಸಕ್ಕೆ ಭೋಜನಕ್ಕೂ ಸಂಬಂಧವಿದೆಯೇ?

ಸಮರ್ಪಣೆಗೆ ಈ ಭೋಜನವು ಸಂಬಂಧವನ್ನು ಹೊಂದಿದ್ದರೂ, ಯೇಸು ಮಾಡಿದ ಭೋಜನಕ್ಕೆ ಇದು ಸೂಚನೆಯಾಗಿರುವದಿಲ್ಲ. ಗ್ರಂಥಗಳು ಸಹ ಇದನ್ನು ತಿಳಿಸುವದಿಲ್ಲ. ಕರ್ತನು ಭೋಜನದ ಕುರಿತು ತಿಳಿಸುವ ಮೊದಲೇ ಅಪೋಸ್ತಲರು ಪಸ್ಕದ ಭೋಜನ ವನ್ನು ಮಾಡಿದ್ದರು. ಆನಂತರ ಯಾವುದೇ ಭೋಜನವನ್ನು ಅವರು ಮಾಡಿರುವದಿಲ್ಲ ನಂತರ ಅವರು ಎಣ್ಣೆ ಮರಗಳ ಗುಡ್ಡಕ್ಕೆ ಹೋದರು (ಮತ್ತಾಯ 26:30; ಮಾರ್ಕ 14:26; ಲೂಕ 22:39). "ಯೇಸುವಿನ ರಕ್ತದಿಂದಾದ ಒಡಂಬಡಿಕೆಯನ್ನು" ಮರುದಿನವರೆಗೆ ಸಮರ್ಪಣೆ ಮಾಡಿರಲಿಲ್ಲ.[1]

ಸಮೂಹ ಬೋಜನವು ಮನುಷ್ಯರ ಒಡಂಬಡಿಕೆಗೆ ಸಂಬಂಧವಿದ್ದದರಿಂದ, ಅದನ್ನು ಕರ್ತನ ಭೋಜನದೊಂದಿಗೆ ಮಾಡುವ ಅಗತ್ಯವಿರಲಿಲ್ಲ. (1) ದೇವರು ಮಾಡಿಕೊಂಡ ಒಡಂಬಡಿಕೆಗೆ ಯಾವುದೇ ವಿಧವಾದ ಭೋಜನವು ಸಂಬಂಧಿಸಿರಲಿಲ್ಲ. (2) ಮೊದಲ ಒಡಂಬಡಿಕೆಯನ್ನು ಪಡೆದ ನಂತರ ಜನರನ್ನು ಹೊರತು ಹಿರಿಯರು ಮಾತ್ರ ಸಹ ಭೋಜನವನ್ನು ಮಾಡಿದರು. (3) ಒಡಂಬಡಿಕೆಗೆ ಸಂಬಂಧ ಪಡುವಂತೆ ಯಾವದೇ ಭೋಜನವನ್ನು ಮಾಡಬಾರದು. (4) ಪಸ್ಕದ ಭೋಜನವು, ಕರ್ತನ ಭೋಜನಕ್ಕೂ ಹಾಗೂ ಇತರೆ ಭೋಜನಕ್ಕೂ ಸಂಬಂಧವಿರುವದಿಲ್ಲ. (5) ಕರ್ತನ ಭೋಜನಕ್ಕೆ ಸಂಬಂಧಪಟ್ಟ, ಭೋಜನಗಳ ಮಾಹಿತಿ ಅಥವಾ ನಿದರ್ಶನ ಇರುವದಿಲ್ಲ. (6) ಹೊಸ ಒಡಂಬಡಿಕೆಯನ್ನು ಕ್ರಿಸ್ತನ ರಕ್ತವು ಸ್ಥಿರಪಡಿಸಿರುವದರಿಂದ ಇತರೆ ಭೋಜನದ ಅಗತ್ಯವಿರುವದಿಲ್ಲ. (7) ಹೊಸ ಹಾಗು ಹಳೇ ಒಡಂಬಡಿಕೆಯು ರಕ್ತದಿಂದ ಸಮರ್ಪಿತವಾಗಿದೆ ಹೊರತು ಸಮೂಹ ಭೋಜನದಿಂದಲ್ಲ (ವಿಮೋಚನಕಾಂಡ 24:7, 8; ಇಬ್ರಿಯ 9:15-17). (8) ಕರ್ತನ ಭೋಜನದೊಂದಿಗೆ ಸಮೂಹ ಭೋಜನವನ್ನು ಮಿಶ್ರ ಮಾಡಬಾರದು ಎಂದು ಪೌಲನ ಪತ್ರಿಕೆಗಳಲ್ಲಿ ತಿಳಿಸಿರುತ್ತವೆ.

---

ಟಿಪ್ಪಣಿ

[1]While some of God's covenants were accompanied by signs, they were not connected with meals (ಆದಿಕಾಂಡ 9:11-17; 15:18; 17:2-21; ವಿಮೋಚನಕಾಂಡ 2:13; ನ್ಯಾಯಸ್ಥಾಪಕ 25:11-13; ಧರ್ಮೋಪದೇಶಕಾಂಡ 29:1; ಕೀರ್ತನೆ 89:3, 4).